ಒ ಎಸ್ ನಂ.**8136/2023**
ಪಿ.ಡಬ್ಲ್ಯೂ:**1**

**ದಿನಾಂಕಃ02.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಪಿ. ಮಹೇಶ., 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ-**

ನಾನು ಕಳೆದ 25 ವರ್ಷಗಳಿಂದ ಕಟ್ಟಡ ಗುತ್ತಿಗೆದಾರನಾಗಿ ಕೆಲಸ ಮಾಡುತ್ತೇನೆ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ನನಗೆ ವೆಂಕಟೇಶ್ ಎನ್ನುವ ಕಡೆಯಿಂದ 2016 ರಲ್ಲಿ ನನ್ನ ಕಚೇರಿಯಲ್ಲಿ ಪ್ರತಿವಾದಿಗಳ ತಾಯಿ ಪರಿಚಯವಾಗಿದ್ದಳು. ನನ್ನ ಕಚೇರಿ ಆ ಕಾಲಕ್ಕೆ ಹಲಸೂರಿನಲ್ಲಿತ್ತು. ಪ್ರತಿವಾದಿಗಳ ತಾಯಿಗೆ ಹಣದ ಅಡಚಣೆ ಇದ್ದುದ್ದರಿಂದ ವೆಂಕಟೇಶ್ ಜೊತೆಗೆ ನನ್ನ ಬಳಿ ಸಾಲ ಕೇಳಲು ಬಂದಿದ್ದಳು. ಆ ಕಾಲಕ್ಕೆ ನಾನು ಅವಳಿಗೆ 1 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದೆನು. ಪ್ರತಿವಾದಿಗಳ ತಾಯಿ ಆ 1 ಲಕ್ಷ ರೂಪಾಯಿಗಳನ್ನು ನಗದು ರೂಪದಲ್ಲಿ ನನಗೆ ವಾಪಸ್ಸು ಕೊಟ್ಟಿದ್ದಳು. ನಾನು money lending ವ್ಯವಹಾರ ಮಾಡುವುದಿಲ್ಲ. ಪ್ರತಿವಾದಿಗಳ ತಾಯಿ ವಿಳಾಸ ನನಗೆ ಗೊತ್ತಿದೆ, ಆದರೆ ಅವಳ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ತಾಯಿಯ ಊರಾದ ನಂಜನಗೂಡಿಗೆ ಹೋಗಿ ಅವಳನ್ನು ಬೇಟಿ ಮಾಡಿದ್ದೇನೆ. ಪ್ರತಿವಾದಿಗಳ ತಾಯಿ ಸಾಲ ಮರುಪಾವತಿ ಮಾಡುವ ಕಾಲಕ್ಕೆ ಅವಳ ಮನೆಗೆ ಹೋಗಿದ್ದೆನು. ಪ್ರತಿವಾದಿಗಳ ತಾಯಿ ಸಾಲ ಪಡೆದ 6 ತಿಂಗಳಲ್ಲಿ ವಾಪಸ್ಸು ನೀಡಿದ್ದಳು. ಪ್ರತಿವಾದಿಗಳ ತಾಯಿ ನನಗೆ ಸಾಲ ಮರುಪಾವತಿ ಮಾಡಿದ ದಿನಾಂಕ ಮತ್ತು ತಿಂಗಳು ನೆನಪಿಲ್ಲ. 2016 ರಲ್ಲಿ ಪ್ರತಿ ತಾಯಿಗೆ ನನ್ನಿಂದ 1 ಲಕ್ಷ ರೂಪಾಯಿ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎನ್ನುವುದು ಸರಿಯಲ್ಲ. ಅನುಸೂಯದೇವಿ ನನಗೆ ಸಾಲ ಕೇಳಿ ಯಾವತ್ತು ಬೇಟಿಯಾಗಿರಲಿಲ್ಲ ಎನ್ನುವುದು ಸರಿಯಲ್ಲ. ಅನುಸೂಯದೇವಿ 2016 ರಲ್ಲಿ ನನ್ನಿಂದ ಸಾಲ ಪಡೆದಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅನುಸೂಯದೇವಿಗೆ ಹಣ ಕೊಟ್ಟ ಬಗ್ಗೆ ನನ್ನ ಆದಾಯ ತೆರಿಗೆ ರಿಟನ್ಸ ನಲ್ಲಿ ಕಾಣಿಸಿದ್ದೇನೆ. ಆ ಬಗ್ಗೆ ದಾಖಲೆಯನ್ನು ಹಾಜರು ಮಾಡಲು ಆಗುತ್ತದೆಯಾ ಎಂದರೆ ಸಾಕ್ಷಿ ಆದಾಯ ತೆರಿಗೆ ಸಲಹೆಗಾರರನ್ನು ಕೇಳಬೇಕು ಎನ್ನುತ್ತಾರೆ. ನನ್ನ ಮತ್ತು ಅನುಸೂಯದೇವಿಯ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ, ಆದ್ದರಿಂದ ಆದಾಯ ತೆರಿಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎನ್ನುವುದು ಸರಿಯಲ್ಲ. ಅನುಸೂಯದೇವಿ ಮತ್ತು ನನ್ನ ನಡುವೆ ನಡೆದಿದೆ ಎಂದು ಹೇಳುವ ವ್ಯವಹಾರ ಆದಾಯ ತೆರಿಗೆ ದಾಖಲೆಗಳಲ್ಲಿ ಕಾಣಸಿಲ್ಲ, ಆದ್ದರಿಂದ ಆದಾಯ ತೆರಿಗೆ ಸಲಹೆಗಾರರನು ಕೇಳಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಒ ಎಸ್ ನಂ.**8136/2023**
ಪಿ.ಡಬ್ಲ್ಯೂ**:1**

1 ನೇ ಪ್ರತಿವಾದಿ ಏನು ಉದ್ಯೋಗ ಮಾಡುತ್ತಾನೆ ಎನ್ನುವುದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ವೈದ್ಯನಾಗಿದ್ದಾನೆ, ಆತ ಟಿವಿಎಸ್ ಫ್ಯಾಕ್ಟರಿಯಲ್ಲಿ ವೈದ್ಯನಾಗಿ ಕೆಲಸ ಮಾಡುತ್ತಾನೆ. ನಾನು ಪ್ರತಿವಾದಿ ನಂ.1 ಅಥವಾ 2 ರವರನ್ನು ಯಾವತ್ತು ಬೇಟಿ ಮಾಡಿರುವುದಿಲ್ಲ. ಅನುಸೂಯದೇವಿಯನ್ನು ನಾನು ನಿಯಮಿತವಾಗಿ ಬೇಟಿ ಆಗುತ್ತಿರಲಿಲ್ಲ. ನನ್ನದು 2 ಬ್ಯಾಂಕ್ ಅಕೌಂಟ್ ಗಳು ಇರುತ್ತವೆ. ನನಗೆ ಚೆಕ್ ಬುಕ್ ಫೆಸಿಲಿಟಿ ಇರುತ್ತದೆ. ನಾನು ಬ್ಯಾಂಕ್ ವ್ಯವಹಾರಕ್ಕಿಂತ ಹೆಚ್ಚಾಗಿ ನಗದು ವ್ಯವಹಾರ ಮಾಡುತ್ತೇನೆ. ನಾನು ಗುತ್ತಿಗೆದಾನನಾಗಿ ಕೆಲಸ ಮಾಡಲು ಯಾವುದೇ ಲೈಸೆನ್ಸ ಪಡೆದಿರುವುದಿಲ್ಲ. ನಾನು ಗುತ್ತಿಗೆದಾರರ ಸಂಘಕ್ಕೆ ಮೆಂಬರ್ ಆಗಿರುವುದಿಲ್ಲ.

ದಿಃ 26.08.2020 ರಂದು ಬೆಂಗಳೂರಿನ ಕಮರ್ಷಿಯಲ್ **ಸ್ಟ್ರೀಟ್** ನಲ್ಲಿರುವ ಶ್ರೀಟಾಕೀಸ್ ಕಾಂಪ್ಲೆಕ್ಸನಲ್ಲಿರುವ ನನ್ನ ಕಚೇರಿಯಲ್ಲಿ ಅನುಸೂಯದೇವಿಗೆ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆನ. ನನ್ನ ಕಚೇರಿಗೆ JSK construction ಎಂದು ಹೆಸರಿದೆ. JSK construction ಎಂಬ ಹೆಸರಿನ ಯಾವುದೇ ಕಚೇರಿ ಕಮರ್ಷಿಯಲ್ **ಸ್ಟ್ರೀಟ್** ನಲ್ಲಿ ಇಲ್ಲ ಎನ್ನುವುದು ಸರಿಯಲ್ಲ. ಕಮರ್ಷಿಯಲ್ **ಸ್ಟ್ರೀಟ್** ನಲ್ಲಿ ಶ್ರೀಟಾಕೀಸ್ ಕಾಂಪ್ಲೆಕ್ಸ್ ಎನ್ನುವ ಯಾವುದೇ ಕಟ್ಟಡ ಇಲ್ಲ ಎನ್ನುವುದು ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ನನ್ನ ಮನೆಯಲ್ಲಿಟ್ಟಿದ್ದ 10 ಲಕ್ಷ ರೂಪಾಯಿಗಳನ್ನು ತಂದು ಕೊಟ್ಟಿದ್ದೆನು. ಅನುಸೂಯದೇವಿ ನನಗೆ 2-3 ಬಾರಿ ಫೋನ್ ಮಾಡಿ ಕೇಳಿದ್ದಳು, ಆದ್ದರಿಂದ ಅವಳಿಗೆ ನಾನು ಹಣವನ್ನು ಕೊಟ್ಟಿದ್ದೆನು. ನಾನು ಹಣ ಕೊಡುವ ಒಂದು ವಾರ ಮುಂಚೆಯಿಂದ ಅನುಸೂಯದೇವಿ ನನಗೆ ಕೇಳುತ್ತಿದ್ದಳು. ಆ ಕಾಲಕ್ಕೆ ಅನುಸೂಯದೇವಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು. ದಿಃ 26.08.2020 ರಂದು ಕೋವಿಡ್-19 ಪ್ರಯುಕ್ತ ಲಾಕ್ ಡೌನ್ ಇತ್ತು ಮತ್ತು ಜನರ ಓಡಾಟಕ್ಕೆ ನಿರ್ಬಂಧ ವಿಧಿಸಲಾಗಿತ್ತು ಎನ್ನುವುದು ಸರಿಯಲ್ಲ. ಆ ಕಾಲಕ್ಕೆ ಹಿರಿಯನಾಗರೀಕರ ಓಡಾಟವನ್ನು ಪೂರ್ತಿಯಾಗಿ ನಿಶೇಧಿಸಲಾಗಿತ್ತು ಎನ್ನುವುದು ಸರಿಯಲ್ಲ. 10 ಲಕ್ಷ ರೂಪಾಯಿಗಳನ್ನು 2 ಸಾವಿರ ಮತ್ತು 500 ಮುಖಬೆಲೆಯಲ್ಲಿ ಕೊಟ್ಟಿದ್ದೇನೆ. ಯಾವ ಮುಖಬೆಲೆಯ ಎಷ್ಟು ನೋಟುಗಳನ್ನು ಕೊಟ್ಟಿದ್ದೇನೆ ಎಂದು ಹೇಳಲು ಬರುವುದಿಲ್ಲ. ದಿಃ 26.08.2020 ರ ಸಮಯದಲ್ಲಿ 50 ಸಾವಿರ ರೂಪಾಗಿಂತ ಹೆಚ್ಚಿನ ವ್ಯವಹಾರವನ್ನು ನಗದು ರೂಪದಲ್ಲಿ ಮಾಡುವಂತಿರಲಿಲ್ಲ ಎಂದರೆ ಸಾಕ್ಷಿ ನನ್ನ ಬಳಿ ನಗದು ಇದ್ದುದ್ದರಿಂದ ಕೊಟ್ಟಿದ್ದೇನೆ ಎನ್ನುತ್ತಾರೆ. 50 ಸಾವಿರ ರೂಪಾಗಿಂತ ಹೆಚ್ಚಿನ ವ್ಯವಹಾರವನ್ನು ನಗದು ರೂಪದಲ್ಲಿ ಮಾಡುವಂತಿಲ್ಲ ಮತ್ತು ಬ್ಯಾಂಕ್ ಮುಖಾಂತರ ಮಾಡಬೇಕು ಎನ್ನುವ ನಿಯಮ ನನಗೆ

ಗೊತ್ತಿರಲಿಲ್ಲ. ನನಗೆ ವರ್ಷಕ್ಕೆ ಸುಮಾರು 8-10 ಲಕ್ಷ ರೂಪಾಯಿ ಆದಾಯವಿದೆ. ನಮ್ಮ ಮನೆಯಲ್ಲಿ ನನ್ನ ಮೇಲೆ ಅವಲಂಬಿತರಾಗಿರುವವರು 3 ಜನ ಇದ್ದಾರೆ. ವರ್ಷಕ್ಕೆ ಸುಮಾರು 1 ರಿಂದ 1 ಕಾಲು ಲಕ್ಷ ರೂಪಾಯಿ ಆದಾಯ ತೆರಿಗೆ ಕಟ್ಟುತ್ತೇನೆ. 2020 ರಲ್ಲಿ ನಾನು ಎಷ್ಟು ಆದಾಯ ತೆರಿಗೆ ಕಟ್ಟಿದ್ದೇನೆ ಎನ್ನುವುದು ನನಗೆ ಗೊತ್ತಿಲ್ಲ. ಅನುಸೂಯದೇವಿಗೆ ಬ್ಯಾಂಕ್ ಟ್ರಾನ್ಸಫರ್ ಮೂಲಕ ಹಣ ಕೊಡಲು ತೊಂದರೆಯಿತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿ ನನ್ನ ಬಳಿ ನಗದು ಹಣ ಇದ್ದುದ್ದರಿಂದ ಕೊಟ್ಟಿದ್ದೇನೆ ಎನ್ನುತ್ತಾರೆ. ನಗದು ಹಣವನ್ನು ಬ್ಯಾಂಕ್ ಗೆ ಹಾಕಲು ಏನಾದರು ತೊಂದರೆಯಿತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿ ನಾನು ಹೆಚ್ಚಾಗಿ ನಗದು ವ್ಯವಹಾರವನ್ನೇ ಮಾಡುತ್ತೇನೆ ಎನ್ನುತ್ತಾರೆ. ದಿಃ 26.08.2020 ರಂದು ಅನುಸೂಯದೇವಿಯ ಅನಾರೋಗ್ಯದ ನಿಮಿತ್ತ ಅವಳು ನಂಜನಗೂಡಿನಿಂದ ಬೆಂಗಳೂರಿಗೆ ಬಂದಿರಲಿಲ್ಲ ಎನ್ನುವುದು ಸರಿಯಲ್ಲ. ಅನುಸೂಯದೇವಿ ನಂಜನಗೂಡಿನಿಂದ ಬೆಂಗಳೂರಿಗೆ ಹೇಗೆ ಬಂದಿದ್ದಳು ಎನ್ನುವುದು ನನಗೆ ಗೊತ್ತಿಲ್ಲ.

ನಿಪಿ.1 ಪ್ರೊನೋಟ್ ನಲ್ಲಿ ಕಂಟೆಂಟ್ ಗಳನ್ನು ನಾನು ಹಣ ಕೊಟ್ಟ ದಿವಸ ನನ್ನ ಕ್ಲರ್ಕ್ ತಿಲಕಾವತಿ ಎನ್ನುವವನು ಫಿಲ್ ಮಾಡಿದ್ದಾನೆ. ಆ ಕಾಲಕ್ಕೆ ನನ್ನ ಇಬ್ಬರು ಉದ್ಯೋಗಿಗಳು ಮತ್ತು ವೆಂಕಟೇಶ್ ಇದ್ದರು. ಇಬ್ಬರು ಉದ್ಯೋಗಿಗಳ ಹೆಸರು ತಿಲಕಾವತಿ ಮತ್ತು ಕುಶಾಲ್ ಜೈನ್. ತಿಲಕಾವತಿ ಇವಳು ಮೆಟಿರಿಯಲ್ ಗಳನ್ನು ಕಳುಹಿಸುವ ಮತ್ತು ತರುಸುವ ಕೆಲಸವನ್ನು ಮಾಡುತ್ತಿದ್ದಳು. ಕುಶಾಲ್ ಜೈನ್ ಸೈಟ್ ಇನ್‌ಚಾರ್ಜ್ ಮತ್ತು ಪೇಮೆಂಟ್ ಕಲೆಕ್ಷನ್ ಕೆಲಸ ಮಾಡುತ್ತಿದ್ದನು. ವೆಂಕಟೇಶ್ ಕಾರ್ಪೆಂಟರ್ ಕಾಂಟ್ರಾಕ್ಟರ್ ಆಗಿದ್ದಾರೆ. ನನಗೆ ಚೆನ್ನಾಗಿ ಗೊತ್ತಿರುವವರೆಗೆ ಹಣ ಕೊಡುವುದನ್ನು ಮಾಡುತ್ತೇನೆ. ಅನುಸೂಯದೇವಿ ತನ್ನ ಮಕ್ಕಳಿಗೆ ಹಣದ ಅವಶ್ಯಕತೆ ಇದೆ ಎಂದು ಕೇಳಿದ್ದಳು. ಅನುಸೂಯದೇವಿಗೆ ಅವಳ ಮಕ್ಕಳನ್ನು ಕರೆದುಕೊಂಡು ಬರುವಂತೆ ನಾನು ಕೇಳಿರಲಿಲ್ಲ, ನನಗೆ ಅದರ ಅವಶ್ಯಕತೆ ಇದೆ ಎಂದು ಅನಿಸಿರಲಿಲ್ಲ. ನಾನು ಅನುಸೂಯದೇವಿಯ ಫೋನ್ ನಂಬರ್ ಪಡೆದಿರಲಿಲ್ಲ. ವೆಂಕಟೇಶ್ ಬಳಿ ಅವಳ ಫೋನ್ ನಂಬರ್ ಇತ್ತು. ನಿಪಿ.1 ಪ್ರೊನೋಟ್ ನಲ್ಲಿ ಅನುಸೂಯದೇವಿ ಇವಳ ಹೆಸರು ಮತ್ತು ವಿಳಾಸ ನಮೂದಿಸಿಲ್ಲ ಎನ್ನುವುದು ನಿಜ.

ನಿಪಿ.2 ಮತ್ತು 4 ಚೆಕ್ ಗಳಲ್ಲಿನ ಕೈಬರಹ ತಿಲಕಾವತಿ ಇವಳದು ಆಗಿರುತ್ತದೆ. ನಿಪಿ.1, 2 ಮತ್ತು 4 ದಾಖಲೆಗಳನ್ನು ಒಂದೇ ದಿವಸ ಮತ್ತು ಒಬ್ಬರೇ ವ್ಯಕ್ತಿ ಬರೆದಿದ್ದಾರೆ. ಈ ದಾಖಲೆಗಳನ್ನು ಬರೆಯುವಾಗ ಅನುಸೂಯದೇವಿ ಹಾಜರಿದ್ದಳು. ಸದರಿ ದಾಖಲೆಗಳನ್ನು ಅನುಸೂಯದೇವಿ ಇವಳ ಸಮಕ್ಷಮ ಬರೆದಿಲ್ಲ ಎನ್ನುವುದು ಸರಿಯಲ್ಲ. ನಿಪಿ.2 ಮತ್ತು 4

ಚೆಕ್ ಗಳಲ್ಲಿನ ದಿನಾಂಕಗಳನ್ನು ಅದೇ ದಿವಸ ನಮೂದಿಸಲಾಗಿದೆ. ಅನುಸೂಯದೇವಿ ಸಾಲ ಮರುಪಾವತಿಗೆ 3 ವರ್ಷಗಳ ಕಾಲವಕಾಶ ಕೇಳಿದ್ದರಿಂದ ಚೆಕ್ ನಲ್ಲಿ 2023 ದಿನಾಂಕ ನಮೂದಿಸಲಾಗಿದೆ. ಚೆಕ್ ಗಳಲ್ಲಿ ಬರೆದ ದಿನಾಂಕಗಳನ್ನು ನಾನೇ ಲೆಕ್ಕ ಹಾಕಿ ಹೇಳಿದ್ದೇನೆ. ನಿಪಿ.2 ಮತ್ತು 4 ಚೆಕ್ ಗಳಲ್ಲಿನ ಹಣವನ್ನು ಕೂಡ ನಾನೇ ಲೆಕ್ಕ ಹಾಕಿ ಹೇಳಿದ್ದೇನೆ. ನಿಪಿ.1, 2 ಮತ್ತು 4 ದಾಖಲೆಗಳನ್ನು ಅನುಸೂಯದೇವಿಯದ್ದು ಎಂದು ಹೇಳುವ ಸಹಿಗಳು ಅವಳದ್ದು ಆಗಿರುವುದಿಲ್ಲ ಎನ್ನುವುದು ಸರಿಯಲ್ಲ. ಆ ಕಾಲಕ್ಕೆ ಅನುಸೂಯದೇವಿ ಸಹಿ ಮಾಡಲು ದೈಹಿಕವಾಗಿ ಆರೋಗ್ಯಕರವಾಗಿರಲಿಲ್ಲ ಎನ್ನುವುದು ಸರಿಯಲ್ಲ. ನಿಪಿ.1, 2 ಮತ್ತು 4 ದಾಖಲೆಗಳನ್ನು ನಾನು ಮತ್ತು 3 ನೇ ಪ್ರತಿವಾದಿ ಸೇರಿ ಸೃಷ್ಟಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಆ ಕಾಲಕ್ಕೆ ನನಗೆ 10 ಲಕ್ಷ ರೂಪಾಯಿ ಸಾಲ ಕೊಡುವಷ್ಟು ಹಣಕಾಸಿನ ಸಾಮರ್ಥ್ಯ ಇರಲಿಲ್ಲ ಎನ್ನುವುದು ಸರಿಯಲ್ಲ. ಹಣ ಕೊಟ್ಟ ನಂತರ ಅನುಸೂಯದೇವಿಯನ್ನು ನಾನು ಪೋನ್ ಮಾಡಿ ಕಾಂಟ್ಯಾಕ್ಟ್ ಮಾಡಿಲ್ಲ. ಸಾಕ್ಷಿ ಮುಂದುವರೆದು 3 ವರ್ಷಗಳ ಸಾಲ ಮರುಪಾವತಿ ನಿಗಧಿ ಮಾಡಿದ್ದರಿಂದ ನಾನು ಮಾತನಾಡಿಲ್ಲ ಎನ್ನುತ್ತಾರೆ.

ಸಾಲದ ಮರುಪಾವತಿ ಬಗ್ಗೆ ವೆಂಕಟೇಶ್ ನನ್ನು ವಿಚಾರಿಸಿದ ಈ ಪ್ರತಿವಾದಿಗಳ ಮಧ್ಯೆ ಓ.ಎಸ್.ನಂ. 13/2021 ದಾವೆ ನಡೆಯುತ್ತಿರುವ ವಿಷಯ ನನಗೆ ಗೊತ್ತಾಯಿತು. ನಿಪಿ.16 ದಾವೆ ಕಾಪಿಯನ್ನು ಮಧುಮಾಲತಿ ಎನ್ನುವ ವಕೀಲರ ಮುಖಾಂತರ ಪಡೆದಿರುತ್ತೇನೆ. ನಿಪಿ.17 ಮೂಲ ಕ್ರಯಪತ್ರವನ್ನು ಸಾಲ ಪಡೆಯುವ ಕಾಲಕ್ಕೆ ಅನುಸೂಯದೇವಿ ನನಗೆ ಕೊಟ್ಟಿದ್ದಳು. ನಿಪಿ.17 ರಲ್ಲಿ ಅನುಸೂಯದೇವಿ ಇವಳ ಸಹಿಯನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಅದನ್ನು ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ನಿಪಿ.17**(ಎ)** ಎಂದು ಗುರುತಿಸಲಾಯಿತು. ಅನುಸೂಯದೇವಿ ನನ್ನಿಂದ ಹಣ ತೆಗೆದುಕೊಂಡ ಹೋದ ಎಷ್ಟು ದಿನಕ್ಕೆ ತೀರಿಕೊಂಡಿದ್ದಾಳೆ ಎನ್ನುವುದು ನನಗೆ ಗೊತ್ತಿಲ್ಲ.

ಅನುಸೂಯದೇವಿ ತೀರಿಕೊಂಡ ವಿಷಯ ಗೊತ್ತಾದ ಮೇಲೆ ನಂಜನಗೂಡಿಗೆ ಹೋಗಿ ಅಕ್ಕಪಕ್ಕದ ಮನೆಯವರನ್ನು ವಿಚಾರಿಸಲಾಗಿ ಅವಳು ತೀರಿಕೊಂಡ ದಿನಾಂಕ ಗೊತ್ತಾಯಿತು. ಅನುಸೂಯದೇವಿ ಸಾಲ ಪಡೆಯುವಾಗ ನಿಗಧಿತ ದಿನಾಂಕಕ್ಕೆ ಚೆಕ್ ಬ್ಯಾಂಕಿಗೆ ಹಾಕುವಂತೆ ಹೇಳಿದ್ದಳು. ಚೆಕ್ ನ್ನು ಬ್ಯಾಂಕ್ ಹಾಕುವಂತೆ ನನ್ನ ಕ್ಲರ್ಕ್ ಗೆ ಹೇಳಿದ್ದೆನು, ಅವರು ಯಾವ ದಿನಾಂಕಕ್ಕೆ ಹಾಕಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ದಿಃ 17.08.2023 ರಂದು ಚೆಕ್ ನ್ನು ಬ್ಯಾಂಕಿಗೆ ಹಾಕುವಂತೆ ನನಗೆ ಯಾರು ಹೇಳಿರಲಿಲ್ಲ. ನಾನು ಚೆಕ್ ನ್ನು ಬ್ಯಾಂಕಿಗೆ ಹಾಕುವ ದಿನಾಂಕಕ್ಕಿಂತ 3 ವರ್ಷದ ಹಿಂದೆಯೇ ಅನುಸೂಯದೇವಿ ತೀರಿಕೊಂಡಿದ್ದಳು ಎನ್ನುವುದು ನನಗೆ ಗೊತ್ತಿಲ್ಲ. ನಿಪಿ.2 ಮತ್ತು 4 ಚೆಕ್

ಗಳನ್ನು ಅನುಸೂಯದೇವಿ ನನಗೆ ಯಾವತ್ತು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನಿಪಿ.17 ದಾಖಲೆಯನ್ನು 3 ನೇ ಪ್ರತಿವಾದಿಯಿಂದ ನಾನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಬ್ಯಾಂಕ್ ನವರು ನನ್ನ ಕೋರಿಕೆಯ ಮೇರೆಗೆ ನಿಪಿ.3 ಮತ್ತು 5 endorsement ಗಳನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅವರು ನಿಯಮಾನುಸಾರ ಕೊಟ್ಟಿದ್ದಾರೆ ಎನ್ನುತ್ತಾರೆ. ಅನುಸೂಯದೇವಿಗೆ 74 ವರ್ಷ ವಯಸ್ಸಾಗಿತ್ತು ಮತ್ತು ಅವಳು ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದಳು, ಆದ್ದರಿಂದ ನನ್ನಿಂದ ಸಾಲ ಪಡೆದಿದ್ದಾಳೆ ಎಂದು ಹೇಳುವ ದಿನದಿಂದ 4 ದಿನಕ್ಕೆ ಅವಳು ತೀರಿಕೊಂಡಿದ್ದಾಳೆ ಎಂದರೆ ಸಾಕ್ಷಿ ಅವಳು ತೀರಿಕೊಂಡಿರುವ ದಿನಾಂಕ ನನಗೆ ಗೊತ್ತಿಲ್ಲ ಎನ್ನುತ್ತಾರೆ. 3 ನೇ ಪ್ರತಿವಾದಿ ಅನುಸೂಯದೇವಿಗೆ ಸೇರಿದ ಮೂಲ ದಾಖಲೆಗಳನ್ನು ನನಗೆ ತಂದು ಕೊಟ್ಟಿದ್ದಾನೆ ಮತ್ತು ಅವುಗಳನ್ನು ಉಪಯೋಗಿಸಿಕೊಂಡು ನಾನು ಈ ದಾವೆ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ನಾನು ಮತ್ತು ಅನುಸೂಯದೇವಿ ಯಾವತ್ತು ಬೇಟಿಯಾಗಿಲ್ಲ ಎನ್ನುವುದು ಸರಿಯಲ್ಲ. ಚೆಕ್ ಬೌನ್ಸ ಆದ ದಿವಸ ನಾನು ವೆಂಕಟೇಶ್ ಗೆ ಫೋನ್ ಮಾಡಿ ತಿಳಿಸಿದ್ದೇನೆ. ವೆಂಕಟೇಶ್ ಯಾರು ಎನ್ನುವುದು ಕೂಡ ಅನುಸೂಯದೇವಿಗೆ ಗೊತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಆ ಕಾಲಕ್ಕೆ ಅಷ್ಟೊಂದು ದೊಡ್ಡ ಮೊತ್ತದ ಹಣ ಪ್ರತಿವಾದಿಗಳಿಗೆ ಅವಶ್ಯಕತೆ ಇರಲಿಲ್ಲ ಎನ್ನುವುದು ಸರಿಯಲ್ಲ. ನಾನು ಮತ್ತು 3 ನೇ ಪ್ರತಿವಾದಿ, ಪ್ರತಿವಾದಿ ನಂ.1 ಮತ್ತು 2 ರವರಿಂದ ಮತ್ತು ಅವರಿಗೆ ಸೇರಿದ ಆಸ್ತಿಯನ್ನು ಪಡೆಯಬೇಕು ಎನ್ನುವ ಉದ್ದೇಶದಿಂದ ಈ ಸುಳ್ಳು ದಾವೆ ದಾಖಲಿಸಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**

ಒ ಎಸ್ ನಂ.**8136/2023**
ಪಿ.ಡಬ್ಲ್ಯೂ:**1**

**ದಿನಾಂಕಃ29.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕೆ.ಪಿ. ಲೀಲೇಶ್, 3 ನೇ ಪ್ರತಿವಾದಿ ಪರ ವಕೀಲರಿಂದಃ-**

ಅನುಸೂಯ ಸಾಲ ಪಡೆಯುವಾಗ ಅವಳ ಜೊತೆ 3 ನೇ ಪ್ರತಿವಾದಿ ಬಂದಿರಲಿಲ್ಲ. ಅನುಸೂಯ ತೀರಿಕೊಂಡ ಮೇಲೆ 3 ನೇ ಪ್ರತಿವಾದಿ, ಅನುಸೂಯ ಮಾಡಿರುವ ಸಾಲ ತೀರಿಸುತ್ತೇನೆ ಎಂದು ನನಗೆ ಹೇಳಿರುವುದಿಲ್ಲ. 3 ನೇ ಪ್ರತಿವಾದಿಗೆ ಸಾಲ ತೀರಿಸುವ ಜವಬ್ದಾರಿ ಇಲ್ಲ ಎಂದರೆ ಸಾಕ್ಷಿ 1 ರಿಂದ 3 ನೇ ಪ್ರತಿವಾದಿಗಳು ಅಂದರೆ ಅನುಸೂಯಳ ಮೂರು ಮಕ್ಕಳು ಸಾಲ ತೀರಿಸಬೇಕು ಎನ್ನುತ್ತಾರೆ. 3 ನೇ ಪ್ರತಿವಾದಿಯ ಮೇಲೆ ಸಾಲ ತೀರಿಸುವ ಜವಬ್ದಾರಿ ಇಲ್ಲ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**